ಈ) ಸದರಿ ಬಡಾವಣೆಯಲ್ಲಿ ನಿವೇಶನದಾರರು ಮನೆಗಳನ್ನು ಕಟ್ಟಲು ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಯನ್ನು 2002–03ನೇ ಸಾಲಿನಲ್ಲಿ ನಿರ್ಮಿಸಲಾಯಿತು. ಮುಂದುವರಿದ ಸರ್.ಎಂ.ವಿಶೇಶ್ವರಯ್ಯ ಬಡಾವಣೆಯನ್ನು 2003–04ನೇ ಸಾಲಿನಲ್ಲಿ ನಿರ್ಮಿಸಲಾಯಿತು.

ಆ) ಎರಡು ಹಂತಗಳಲ್ಲಿ ಬಡಾವಣೆಯನ್ನು ರಚಿಸಿ 13974 ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ.

ಇ) 5 ವರ್ಷಗಳು.

ಈ) ಸದರಿ ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳಾದ ವಿದ್ಯುದ್ದೀಕರಣವನ್ನು 1,2,3,4,5 ಮತ್ತು 6ನೇ ಬ್ಲಾಕ್‌ಗಳಿಗೆ ಕಲ್ಪಿಸಲಾಗಿದೆ. ಬ್ಲಾಕ್ ಸಂಖ್ಯೆ:7, 8 ಹಾಗೂ 9ಕ್ಕೆ ಕಾಮಗಾರಿ ಪ್ರಗತಿಯಲ್ಲಿದೆ.

546 ಶ್ರೀ ಸೋಮಲಿಂಗಪ್ಪ ಎಂ.ಎಸ್. : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾರವಿ ಬೇಲೂರು ರಾಜ್ಯ ಹೆದ್ದಾರಿ 63ರ ಕಿಮೀ. 6–10ರ ರಾರವಿ ಗ್ರಾಮದ ಪಕ್ಕದಲ್ಲಿ ಹರಿಯುವ ರಾರವಿ ಹಗರಿಗೆ ಸೇತುವೆ ನಿರ್ಮಾಣ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸೇತುವೆ ನಿರ್ಮಾಣದಿಂದ ಗಡಿ ಭಾಗದ ಜನರಿಗೆ ಅನುಕೂಲವಾಗುವುದು ಸರ್ಕಾರಕ್ಕೆ ತಿಳಿದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

973 ಶ್ರೀ ಮಂಜುನಾಥ್ ಹೆಚ್.ಪಿ. : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕು ಬಳಿಕೆರೆಯಲ್ಲಿ ಬಸ್‌ನಿಲ್ದಾಣ ನಿರ್ಮಾಣದ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಯ ರೂಪು ರೇಷೆ, ಸ್ಥಳ ಗುರುತಿಸುವಿಕೆ, ಅಂದಾಜು ವೆಚ್ಚ ಹಾಗೂ ಪೂರ್ಣ ಪ್ರಸ್ತಾವನೆಯ ವಿವರ ನೀಡುವುದು (ದಾಖಲಾತಿಗಳನ್ನು ಒದಗಿಸುವುದು);

ಇ) ಈ ಯೋಜನೆಗಳನ್ನು ಎಷ್ಟು ಕಾಲಮಿತಿಯೊಳಗೆ ಕೈಗೆತ್ತಿಕೊಳ್ಳಲಾಗುವುದು (ಪೂರ್ಣ ವಿವರ ನೀಡುವುದು)?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) ಹೌದು.

ಆ) ಬಳಿಕೆರೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ 1922.00 ಚ.ಮೀ. ವಿಸ್ತೀರ್ಣದ ಜಮೀನಿಗೆ 10.00 ಲಕ್ಷ ರೂ.ಗಳನ್ನು ಲೋಕೋಪಯೋಗಿ ಇಲಾಖೆಗೆ ಪಾವತಿಸಿ ದಿನಾಂಕ: 27-11-2008 ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಶಕ್ಕೆ ಪಡೆಯಲಾಗಿರುತ್ತದೆ. ಈ ಬಗ್ಗೆ ಸಾರಿಗೆ ಅವಶ್ಯಕತೆ ಮತ್ತು ನಿಗಮದ ಆರ್ಥಿಕ ಸಂಪನ್ಮೂಲಗಳಿಗನುಗುಣವಾಗಿ ಮುಂದಿನ ಕ್ರಮ ಜರುಗಿಸಲಾಗುವುದು. (ದಾಖಲಾತಿಗಳ ಪ್ರಗತಿಯನ್ನು ಲಗತ್ತಿಸಿದೆ).

ಇ) ಈ ಬಗ್ಗೆ ಸಾರಿಗೆ ಅವಶ್ಯಕತೆ ಮತ್ತು ನಿಗಮದ ಆರ್ಥಿಕ ಸಂಪನ್ಮೂಲಗಳಿಗನುಗುಣವಾಗಿ ಮುಂದಿನ ಕ್ರಮ ಜರುಗಿಸಲಾಗುವುದು.

ಚು.ಗು.ಇ.ಪ್ರ.ಸಂ-973

ಕ.ರಾ.ರ.ಸಾ.ನಿಗಮ

ಮೈಸೂರು ಗ್ರಾಮಾಂತರ ವಿಭಾಗ : ಮೈಸೂರು

ಸಂ:ಕರಾಸಾ:ಮೈಗ್ರಾವಿ:ಹಿವಿನಿ:ಕಾಮಗಾರಿ: 151 :07-08 ದಿನಾಂಕ:30-08-07

ಸ್ಥಿರಾಸ್ತಿ ಅಧಿಕಾರಿಗಳು,
ಕ.ರಾ.ರ.ಸಾ. ನಿಗಮ,
ಕೇಂದ್ರ ಕಛೇರಿ,
ಶಾಂತಿನಗರ,
ಬೆಂಗಳೂರು.

ಮಾನ್ಯರೇ,

ವಿಷಯ : ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ನಿವೇಶನವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ವಹಿಸುವ ಬಗ್ಗೆ.

ಉಲ್ಲೇಖ : 1) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ/ಲೋ.ಇ/30/ ಬಿ.ಎಂ.ಎಸ್ 2007 ಬೆಂಗಳೂರು ದಿನಾಂಕ:13–07–2007.
2) ಕಾರ್ಯಪಾಲಕ ಇಂಜಿನಿಯರ್ ಲೋ.ಇಲಾಖೆ ವಿಶೇಷ ವಿಭಾಗ ಹುಣಸೂರು ಇವರ ಕಛೇರಿ ಪತ್ರ ಸಂಖ್ಯೆ ಕಾಇಂ/ ಲೋ.ಇ.ವಿ.ವಿ.ಯ/ಜೆಇ(ಎಸ್.ಜೆ) ಬಿಳಿಕೆರೆ/07–08/2329 –29 ದಿನಾಂಕ: 29–08–2007.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದಲ್ಲಿ ಉದ್ದೇಶಿತ ಬಸ್ ನಿಲ್ದಾಣವನ್ನು ನಿರ್ಮಿಸಲು ಲೋಕೋಪಯೋಗಿ ಇಲಾಖೆಗೆ ಸೇರಿದ 1922 ಚಮೀ ವಿಸ್ತೀರ್ಣದ ಜಮೀನನ್ನು ನೀಡುವಂತೆ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ ಹುಣಸೂರು ಇವರನ್ನು ಕೋರಲಾಗಿತ್ತು. ಕರ್ನಾಟಕ ಸರ್ಕಾರ ಸದರಿ ಜಮೀನಿಗೆ ರೂ.10.00 ಲಕ್ಷ ಮೌಲ್ಯವನ್ನು ನಿಗದಿಪಡಿಸಿ, ನಮ್ಮ ಸಂಸ್ಥೆಯಿಂದ ಸದರಿ ಮೊತ್ತವು ಪಾವತಿಯಾದ ನಂತರ ಹಸ್ತಾಂತರಿಸಲು ಆದೇಶವನ್ನು ಹೊರಡಿಸಿದೆ. ಆದೇಶಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಲಾಗಿದೆ.

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು, ಇವರು ಉಲ್ಲೇಖ (2) ರಲ್ಲಿ ಸೂಚಿಸಿರುವ ಪತ್ರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಬಿಳಿಕೆರೆ ಗ್ರಾಮದಲ್ಲಿ ನೂತನ ಬಸ್ ನಿಲ್ದಾಣವನ್ನು ನಿರ್ಮಿಸಲು ರೂ.93.00 ಲಕ್ಷಗಳಿಗೆ ಈಗಾಗಲೇ ಅಂದಾಜುಪಟ್ಟಿಯನ್ನು ಸೂಕ್ತಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ. ನಿವೇಶನವನ್ನು ಸಂಸ್ಥೆಯ ವಶಕ್ಕೆ ಪಡೆದುಕೊಳ್ಳಬೇಕಾಗಿದ್ದು, ಕರ್ನಾಟಕ ಸರ್ಕಾರದ ಆದೇಶಾನುಸಾರ ರೂ.10.00 ಲಕ್ಷಗಳನ್ನು ಲೋಕೋಪ ಯೋಗಿ ಇಲಾಖೆಗೆ ಪಾವತಿಸಬೇಕಾಗಿರುತ್ತದೆ.

ಆದುದರಿಂದ ಸದರಿ ಮೊತ್ತವನ್ನು ಪಾವತಿಸಲು ಅನುಮೋದನೆಯನ್ನು ನೀಡಬೇಕೆಂದು ಕೋರಲಾಗಿದೆ.

ತಮ್ಮ ವಿಶ್ವಾಸಿ,
ಸಹಿ:
ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ: ಮೈಸೂರು(ಗ್ರಾ)ವಿಭಾಗ,
ಮೈಸೂರು.

ಪ್ರತಿಯನ್ನು: ಆದರಪೂರ್ವವಾಗಿ ಮುಖ್ಯ ಕಾಮಗಾರಿ ಅಭಿಯಂತರರು, ಕರಾರಸಾನಿಗಮ, ಕೇಂದ್ರಕಛೇರಿ, ಶಾಂತಿನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಪ್ರತಿಯನ್ನು: ಗೌರವಪೂರ್ವಕವಾಗಿ ಕಾರ್ಯನಿರ್ವಾಹಕ ಅಭಿಯಂತರು, ಕರಾರಸಾನಿಗಮ, ಕಾಮಗಾರಿ ವಿಭಾಗ, ಮೈಸೂರು ಇವರಿಗೆ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.

ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ: ಮೈಸೂರು (ಗ್ರಾ) ವಿಭಾಗ,
ಮೈಸೂರು.

ವಿಷಯ : ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ನಿವೇಶನವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ವಹಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಲೋಇ 2 ಬಿಎಂಎಸ್ 2005, ದಿನಾಂಕ: 31–8–2006,
2) ಶಾಸಕರು, ಹುಣಸೂರು ಕ್ಷೇತ್ರ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ನಿಯಮಿತ, ಇವರ ಮನವಿ.
3) ಮುಖ್ಯ ಇಂಜಿನಿಯರ್,ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು,ಇವರ ಪತ್ರ ಸಂಖ್ಯೆ:ಸಂ ಕದ/ ಕನಿಶಾ/ ಎಇ–3/2006 ದಿನಾಂಕ: 26–4–2006.

<u>ಪ್ರಸ್ತಾವನೆ :</u>

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ 1922 ಚದರ ಮೀಟರ್ ವಿಸ್ತೀರ್ಣದ ಜಮೀನನ್ನು ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ನಿರ್ಮಿಸುವ ಸಲುವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸದರಿ ನಿವೇಶನದಲ್ಲಿರುವ ವಸತಿಗೃಹಗಳ ಕಟ್ಟಡಗಳನ್ನು ಕೆಡವಿ ಅದರಿಂದ ಬರುವ ಸಾಮಗ್ರಿಗಳ ಬೆಲೆ ರೂ.30,200/– ಗಳನ್ನು ಸೇರಿಸಿಕೊಂಡು ಈ ಖಾಲಿ ನಿವೇಶನವನ್ನು ಪ್ರಚಲಿತ

ಮಾರುಕಟ್ಟೆ ದರ ವಿಧಿಸಿ ಸದರಿ ಜಮೀನನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಹಸ್ತಾಂತರಿಸಲು ಮೊದಲಾದ (1) ರ ಆದೇಶದಲ್ಲಿ ತಿಳಿಸಲಾಗಿತ್ತು.

ಹುಣಸೂರು ತಾಲ್ಲೂಕಿನ ಬಿಳಿಕೆರೆ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಸದರಿ ಜಾಗವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಳಸಿಕೊಳ್ಳುವ ಕಾರಣ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಗೆ ಉಚಿತವಾಗಿ ನೀಡಬೇಕೆಂದು ಮೇಲೆ ಓದಲಾದ (2) ರ ಪತ್ರದಲ್ಲಿ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು.

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು, ಇವರು ಈ ಮನವಿ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು ನಿವೇಶನವು ಪ್ರಚಲಿತ ಮಾರುಕಟ್ಟೆ ದರದಂತೆ ಚದರಡಿ ಒಂದಕ್ಕೆ ರೂ.70–00 ರಂತೆ ಹಾಗೂ ಕಟ್ಟಡಗಳನ್ನು ಕೆಡವಿದ ನಂತರ ಬರುವ ಸಾಮಗ್ರಿಗಳ ಬೆಲೆಗಳನ್ನು ಒಳಗೊಂಡಂತೆ ಒಟ್ಟಾರೆ ರೂ,14,78,338–00 ಆಗುವುದಾಗಿ ತಿಳಿಸಿ ಸದರಿ ನಿವೇಶನ ನೀಡುವಂತೆ ಮೇಲೆ ಓದಲಾದ (3)ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲೋಇ 30 ಬಿಎಂಎಸ್ 2007, ಬೆಂಗಳೂರು, ದಿನಾಂಕ: 13–7–2007.

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ 1922 ಚದರ ಮೀಟರ್ ವಿಸ್ತೀರ್ಣದ ಜಮೀನನ್ನು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ನಿರ್ಮಿಸುವ ಸಲುವಾಗಿ ಸದರಿ ನಿವೇಶನದಲ್ಲಿರುವ ವಸತಿಗೃಹಗಳ ಕಟ್ಟಡಗಳನ್ನು ಕೆಡವಿದರಿಂದ ಬರುವ ಸಾಮಗ್ರಿಗಳ ಬೆಲೆ ರೂ.30,200/– ಸೇರಿದಂತೆ ರೂ.10.00 ಲಕ್ಷಗಳಿಗೆ (ಹತ್ತು ಲಕ್ಷ ರೂಪಾಯಿಗಳು ಮಾತ್ರ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಮೇಶ್ ಕೆ.ಜಾಗೀರ್ ದಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ (ಕಟ್ಟಡಗಳು)

ಪ್ರತಿ :

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ–2), ಬಹುಮಹಡಿ ಕಟ್ಟಡಗಳು, ಬೆಂಗಳೂರು.
4) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
5) ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವೃತ್ತ, ಮೈಸೂರು.
6) ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.
7) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

ನಂ:ಕಾಇಂ:ಲೋಇವಿವಿಹು:ಜೆಇ(ಎಸ್ ಜೆ) ಬಿಳಿಕೆರೆ:07–08

ಪ್ರತಿಯನ್ನು ವಿಭಾಗಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ. ಮೈಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

2 ಪ್ರತಿಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋ ಇಲಾಖೆ ಉಪವಿಭಾಗ ಹುಣಸೂರು ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

ಕಾರ್ಯಪಾಲಕ ಇಂಜಿನಿಯರ್
ಲೋ ಇಲಾಖೆ ವಿಶೇಷವಿಭಾಗ, ಹುಣಸೂರು.

ಚು.ಗು.ಇ.ಪ್ರ.ಸಂ–973

ಕ.ರಾ.ರ.ಸಾ.ನಿಗಮ :: ಮೈಸೂರು (ಗ್ರಾ) ವಿಭಾಗ :: ಮೈಸೂರು

ಕಾಮಗಾರಿ ಶಾಖೆ

ಸಂ.ಕರಾಸ:ಮೈಗ್ರಾವಿ:ವಿನಿ:ಕಾಮಗಾರಿ: 305 :08–09 ದಿನಾಂಕ:28–11–08

ಮುಖ್ಯ ಅಭಿಯಂತರರು/ಸ್ಥಿರಾಸ್ತಿ ಅಧಿಕಾರಿಗಳು,
ಕ.ರಾ.ರ.ಸಾ.ನಿಗಮ,
ಕಾಮಗಾರಿ ಇಲಾಖೆ,
ಕೇಂದ್ರ ಕಛೇರಿ,
ಬೆಂಗಳೂರು.

ಮಾನ್ಯರೇ,

ವಿಷಯ : ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದಲ್ಲಿ ಉದ್ದೇಶಿತ ಬಸ್ ನಿಲ್ದಾಣಕ್ಕಾಗಿ ಲೋಕೋಪಯೋಗಿ ಇಲಾಖೆಯಿಂದ 1922.00 ಚಮೀ ವಿಸ್ತೀರ್ಣದ ಜಮೀನನ್ನು ಸಂಸ್ಥೆಯ ಸ್ವಾಧೀನಕ್ಕೆ ಪಡೆದುಕೊಂಡಿರುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದಲ್ಲಿ ಉದ್ದೇಶಿತ ಬಸ್ ನಿಲ್ದಾಣಕ್ಕಾಗಿ ಲೋಕೋಪಯೋಗಿ ಇಲಾಖೆಯಿಂದ 1922.00 ಚ.ಮೀ. ವಿಸ್ತೀರ್ಣದ ಜಮೀನನ್ನು ದಿನಾಂಕ: 27–11–2008 ರಂದು ನಮ್ಮ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಲೋಕೋಪಯೋಗಿ ಇಲಾಖೆ ಹುಣಸೂರು ಉಪ ವಿಭಾಗದ ಪ್ರತಿನಿಧಿಯಾಗಿ ಶ್ರೀ ರುದ್ರೇಶ್, ಸಹಾಯಕ ಅಭಿಯಂತರರು ಸ್ಥಳದಲ್ಲಿ ಜಮೀನನ್ನು ಅಳೆದು ಚೆಕ್ಕುಬಂದಿಯನ್ನು ಗುರುತಿಸಿಕೊಟ್ಟಿರುತ್ತಾರೆ. ಜಮೀನನ್ನು ಸ್ವಾಧೀನಕ್ಕೆ ಪಡೆದುಕೊಂಡ ಬಗ್ಗೆ ಜಮೀನಿನ ನಕ್ಷೆಯ ಪ್ರತಿಯನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,
ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ: ಮೈಸೂರು(ಗ್ರಾ)ವಿಭಾಗ,
ಮೈಸೂರು.

(ಅಡಕ: ನಕ್ಷೆಯ ಪ್ರತಿ ಪುಟ ತಿರುಗಿಸಿ ನೋಡುವುದು)


EXISTING
SUBORDINATE
QUARTERS
EXISTING
TWIN QUARTERS
TUMKUR